# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 76 (16)

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಬಿ.ಎಂ. ಫಾರೂಕ್
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಉತ್ತರಿಸುವ ದಿನಾಂಕ : 13.02.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಉಡುಪಿ ಮತ್ತು ಮಂಗಳೂರು ಜಿಲ್ಲೆಯಲ್ಲಿರುವ ಒಟ್ಟು ಮೀನುಗಾರರ ಸಂಖ್ಯೆ ಎಷ್ಟು; | ಮಂಗಳೂರು ಜಿಲ್ಲೆಯಲ್ಲಿರುವ ಒಟ್ಟು ಮೀನುಗಾರರ ಸಂಖ್ಯೆ 66,530 ಮತ್ತು ಉಡುಪಿ ಜಿಲ್ಲೆಯಲ್ಲಿರುವ ಒಟ್ಟು ಮೀನುಗಾರರ ಸಂಖ್ಯೆ 1,98,759. |
| ಆ | ಮೀನುಗಾರರಿಗೆ ಮೀನುಗಾರಿಕೆ ಚಟುವಟಿಕೆಗಳಾದ ಒಣಮೀನು ಶೇಖರಣೆ, ಮೀನುಗಳ ಸಂರಕ್ಷಣೆ, ಕೋಲ್ಡ್ ಸ್ಟೋರೇಜ್ ಘಟಕಗಳನ್ನು ನಿರ್ಮಿಸಲು ಕೈಗಾರಿಕೆ ಕ್ಲಸ್ಟರ್ ಅವಶ್ಯಕ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ವತಿಯಿಂದ ನೇರವಾಗಿ ಕೋಲ್ಡ್ ಸ್ಟೋರೇಜ್ ಘಟಕ ಸ್ಥಾಪಿಸುವುದಿಲ್ಲ. ಆದಾಗ್ಯೂ, ಖಾಸಗಿ ಉದ್ದಿಮೆದಾರರು ಒಣಮೀನು ಶೇಖರಣೆ, ಮೀನುಗಳ ಸಂರಕ್ಷಣೆ, ಕೋಲ್ಡ್ ಸ್ಟೋರೇಜ್ ಘಟಕ ಸ್ಥಾಪಿಸಿದ್ದಲ್ಲಿ ಕೈಗಾರಿಕಾ ನೀತಿ 2020-25ರಂತೆ ಲಭ್ಯವಿರುವ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತದೆ.<br><br>ಅಲ್ಲದೇ, ಮೀನುಗಾರಿಕೆ ಇಲಾಖೆಯಿಂದ ಸದರಿ ಚಟುವಟಿಕೆಗಳ ಅವಶ್ಯಕತೆಗಳನ್ನು ಪರಿಗಣಿಸಿ, ಮೀನು ಸಂರಕ್ಷಣೆ, ಕೋಲ್ಡ್ ಸ್ಟೋರೇಜ್, ಐಸ್ ಪ್ಲಾಂಟ್, ಶಾಖನಿರೋಧಕ / ಶೀತಲೀಕೃತ ಮೀನು ಮಾರಾಟ ವಾಹನಗಳನ್ನು ಸ್ಥಾಪಿಸಲು / ಖರೀದಿಸಲು ಕೇಂದ್ರ ಪುರಸ್ಕೃತ ಯೋಜನೆಯಾದ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಆರ್ಥಿಕ ನೆರವು ನೀಡಲಾಗುತ್ತಿದೆ. |
| ಇ | ಉಡುಪಿ ಮತ್ತು ಮಂಗಳೂರು ಮಧ್ಯದಲ್ಲಿರುವ ಪಡುಬಿದ್ರೆಯಲ್ಲಿ, ಸರ್ಕಾರದ ಜಮೀನು ಲಭ್ಯವಿದ್ದು, ಅಲ್ಲಿ ಮೀನುಗಾರಿಕೆ ಕೈಗಾರಿಕೆ ಕ್ಲಸ್ಟರ್‌ನ್ನು Food and Oil Process Industry ವತಿಯಿಂದ ಯಾವಾಗ ಪ್ರಾರಂಭಿಸಲಾಗುವುದು? | ಖಾಸಗಿ ಉದ್ದಿಮೆದಾರರು ಒಣಮೀನು ಶೇಖರಣೆ, ಮೀನುಗಳ ಸಂರಕ್ಷಣೆ, ಕೋಲ್ಡ್ ಸ್ಟೋರೇಜ್ ಘಟಕ ಸ್ಥಾಪಿಸಿದ್ದಲ್ಲಿ, ಒಂದೇ ರೀತಿಯ ಕನಿಷ್ಠ ಅಥವಾ 20ಕ್ಕಿಂತ ಹೆಚ್ಚು ಕೈಗಾರಿಕೆಗಳು ಕಂಪನಿಗಳ ಕಾಯ್ದೆಯ ಸೆಕ್ಷನ್-8 ರಡಿಯಲ್ಲಿ ವಿಶೇಷ ವಾಹಕ ಘಟಕ (SPV) ಸ್ಥಾಪಿಸಿ, ಕ್ಲಸ್ಟರ್ ಅಭಿವೃದ್ಧಿಪಡಿಸಲು ಮುಂದೆ ಬಂದಲ್ಲಿ ಕೇಂದ್ರ ಸರ್ಕಾರದ ಕ್ಲಸ್ಟರ್ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸೌಲಭ್ಯ ನೀಡಲು ಅಗತ್ಯ ಕ್ರಮ ವಹಿಸಲಾಗುತ್ತದೆ. |

ಸಿಐ 51 ಎಸ್‌ಪಿಐ 2024

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು